**ದಿನಾಂಕಃ 21.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಓ ಎಸ್ 176/90 ದಾವೆಯ ವಿರುದ್ಧ ನೀವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರ ಸಾಕ್ಷಿ ಅದರ ಚಾಲೆಂಜ್ ಗೆ ಈ ದಾವೆ ಸಲ್ಲಿಸಿದ್ದೆನೆ. ಆ ದಾವೆಯಎ ಮೇಲೆ ಮೇಲ್ಮನವಿ ಸಲ್ಲಿಸಲು ನಿಮಗೆ ತೊಂದರೆ ಇತ್ತೇ ಎಂದರೆ ಸಾಕ್ಷಿ ಸುಮ್ಮನೆ ಮುಖ ನೋಡುತ್ತಾ ನಿಲ್ಲುತ್ತಾರೆ. ಪ್ರತಿವಾದಿ ದಾವಾ ಆಸ್ತಿಯ ಪೂರ್ವದಿಕ್ಕಿನಲ್ಲಿ ಅರಣ್ಯ ಇಲಾಖೆಯ ಅನುಮತಿಯನ್ನು ಪಡೆದು ಸಸಿಗಳನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಆಸ್ತಿಯಲ್ಲೇನೂ ನೆಟ್ಟಿಲ್ಲ, ನಮ್ಮ ಆಸ್ತಿಯ ಪಕ್ಕದಲ್ಲಿ ಹಾಕಿರುತ್ತಾರೆ ಎಂದು ಹೇಳುತ್ತಾರೆ. ನಾನು ಹೇಳುವಂತಹ ನನ್ನ ಆಸ್ತಿಯೇ ಅಲ್ಲಿ ಅಸ್ತಿತ್ವದಲ್ಲಿ ಇಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆಂಪಮ್ಮನವರು ಎಸಿ ನ್ಯಾಯಾಲಯದಲ್ಲಿ ಆರ್ ಎ 14/86-87 ಪ್ರಕರಣವನ್ನು ದಾಖಲಿಸಿದ ಬಗ್ಗೆ ನಿಮಗೇನಾದರೂ ಮಾಹಿತಿ ಇದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಮೇಲ್ಮನವಿ ದಿಃ15-12-1991 ರಲ್ಲಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಕೆಂಪಮ್ಮ ಡಿಸಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಆರ್ ಎ 111/98-99 ಪ್ರಕರಣವು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಮ್ಮನವರು ಸದರಿ ಎಸಿ ನ್ಯಾಯಾಲಯ ಹಾಗೂ ಜಿಲ್ಲಾ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಪ್ರಕರಣಗಳಲ್ಲಿ ವಕೀಲರ ಮುಖಾಂತರ ಸಲ್ಲಿಸಿದ ವಕಾಲತ್ತುಗಳಲ್ಲಿನ ಅವರ ಸಹಿಗಳಿಗೂ ಮತ್ತು ನಿಪಿ-7 ರಲ್ಲಿನ ಅವರದೆಂದು ಹೇಳುವ ಸಹಿಗಳಿಗೂ ವ್ಯತ್ಯಾಸವಿದೆ ಎಂದರೆ ಸಾಕ್ಷಿ ವ್ಯತ್ಯಾಸವಿಲ್ಲ ಎನ್ನುತ್ತಾರೆ. ಮಂಜೂರಾತಿ ರದ್ದಾದ ಕಾರಣ ಪೋಡಿ ಮಾಡಲು ದಿಃ21-2-2013 ರಲ್ಲಿ ಅವಕಾಶವೇ ಇರಲಿಲ್ಲ ಎಂದರೆ ಸಾಕ್ಷಿ ದುರಸ್ತಾಗಿ 106 ಎಂದು ಹೊಸ ಸರ್ವೆ

ನಂಬರು ಆಗಿರುತ್ತದೆ ಎನ್ನುತ್ತಾರೆ. ದಿಃ 16-3-1987 ರಲ್ಲಿ ಕೆಂಪಮ್ಮನವರು ಕ್ರಯಪತ್ರ ಬರೆದುಕೊಟ್ಟಿರುತ್ತಾರೆಂದು ಹೇಳಿರುತ್ತೀರಿ ಅವರು ಯಾವ ವಿಳಾಸದಲ್ಲಿದ್ದರು ಎಂದರೆ ಸಾಕ್ಷಿ ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿನ ಮನೆ ನಂಬರ್ 269 ರಲ್ಲಿ ಎಂದು ನುಡಿಯುತ್ತಾರೆ.ನಾನು ಹೇಳಿದ ವಿಳಾಸದಲ್ಲಿ ಕೆಂಪಮ್ಮನವರು ವಾಸವೇ ಇರಲಿಲ್ಲ, ಅದು ಕೆಂಪಮ್ಮನವರಿಗೆ ಸೇರಿದ ವಿಳಾಸವೇ ಅಲ್ಲ ಎಂದರೆ ಸುಳ್ಳು, ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಪುಟ ಸಂ2 ರಲ್ಲಿ ಕಂಡಿಕೆ ಸಂಃ1 ರಲ್ಲಿ ಮೇಲಿನಿಂದ 3 ಮತ್ತು 4 ನೇ ಸಾಲಿನಲ್ಲಿ ಎ ಅನುಸೂಚಿ ಮತ್ತು ಬಿ ಅನುಸೂಚಿ ಸ್ವತ್ತುಗಳೆಂದು ನಮೂದಿಸಿದ್ದು, ಅವು ಯಾವುವು ಎಂದರೆ ಸಾಕ್ಷಿ ಅದು ನನಗೆ ತಿಳಿದಿಲ್ಲ, ಡಿಕ್ರಿ ಕಾಪಿಯಲ್ಲಿತ್ತು ಎನ್ನುತ್ತಾರೆ ಕೆಂಪಮ್ಮನವರಿಗೆ ಆದ ಗ್ರ್ಯಾಂಟ್ ವಜಾ ಆಗಿರುವ ಬಗ್ಗೆ ಅವರು ಮೇಲ್ಮನವಿ ಏನಾದರೂ ಸಲ್ಲಿಸಿದ್ದರೇ ಎಂಬ ಬಗ್ಗೆ ನೀವೇನಾದರೂ ತಿಳಿದುಕೂಂಡಿದ್ದೀರಾ ಎಂದರೆ ಸಕ್ಷಿ ಕೆಂಪಮ್ಮ ಅಪೀಲು ಮಾಡಿಲ್ಲ, ನಾನು ಅಪೀಲು ಮಾಡಿರುತ್ತೇನೆ ಎನ್ನುತ್ತಾರೆ. ಕೆಂಪಮ್ಮನ ಅಪೀಲು ವಜಾ ಆದ ಕಾರಣ ಅದರ ವಿರುದ್ಧ ಅವರು ಮೇಲ್ಮನವಿಯನ್ನು ಸಲ್ಲಿಸದೇ ಇದ್ದ ಕಾರಣ, ನನಗೆ ಮೇಲ್ಮನವಿ ಸಲ್ಲಿಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ತಪ್ಪು . ಯಾರಿಗೆ ಗ್ರ್ಯಾಂಟ್ ಆಗಿರುತ್ತದೆ , ಗ್ರ್ಯಾಂಟ್ ಯಾರು ವಜಾ ಮಾಡಿರುತ್ತಾರೆ, ಸದರಿ ಅಧಿಕಾರವನ್ನು ಪುನರ್ ಸ್ಥಾಪಿಸಬೇಕು ಎಂದರೆ ಸಾಕ್ಷಿ ಎ ಸಿರವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕೆಂಪಮ್ಮನಾಗಲೀ, ನಾನಾಗಲೀ, ದಾವಾ ಸ್ವತ್ತಿನ ಆಸ್ತಿಯ ಹಕ್ಕು ಸ್ವಾಧೀನಾನುಭವದಲ್ಲಿ ಯಾವತ್ತಿಗೂ ಇಲ್ಲ, ಎಂದು ಇಲ್ಲ ಎಂದರೆ ನಾವೇ ಇದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾನು ಬಿಕ್ಲಂದಾರರು, ಸಾಕ್ಷಿದಾರರು ಎಲ್ಲರೂ ಸೇರಿ ನಿಪಿ-7 ಕ್ರಯಪತ್ರವನ್ನು ಕೆಂಪಮ್ಮನವರದೆಂದು ಹೇಳಿ ಸೃಷ್ಟಿಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹಕ್ಕು

ಮತ್ತು ಸ್ವಾಧೀನಾನುಭವದಲ್ಲಿರುವ ದಾವಾ ಆಸ್ತಿಯನ್ನು ದಕ್ಕಿಹಾಕಿಕೊಳ್ಳಲು, ನಿಪಿ-14 ರಿಂದ ನಿಪಿ-27ರ ದಾಖಲೆಗಳನ್ನು ಸೃಷ್ಟಿಮಾಡಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಹಕ್ಕು ಮತ್ತು ಸ್ವಾಧೀನಾನುಭವದಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ ಫೋಟೋ ಮತ್ತು ಸಿಡಿಗಳನ್ನು ಸೃಷ್ಟಿಸಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ.

ನನ್ನ ಹೆಂಡತಿಗೆ ಎಲ್ಲಾ ವಿಚಾರಗಳೂ ತಿಳಿದಿದ್ದು ಅನುಕೂಲ ಮಾಡಿಕೊಡಲು ಸಾಕ್ಷಿಯಾಗಿ ಆಕೆಯಿಂದ ಮೊಕ್ತ್ಯಾರುನಾಮೆಯನ್ನು ಪಡೆದು, ಈಗ ನನ್ನನ್ನು ವಿಚಾರಣೆಗೆ ಒಳಪಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಆಕೆಗೆ ಮೈಂಡ್ ಸ್ಟ್ರೋಕ್ ಆಗಿರುತ್ತದೆ ಎಂದು ಹೇಳುತ್ತಾರೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ